ಗೊಂದಲಕ್ಕೆ ಒಳಗಾಗುತ್ತೇನೆ. ಅಂದರೆ, ಕೆಲವು ಅಭಿಪ್ರಾಯಗಳನ್ನು ಹೇಳತಕ್ಕ ಸ್ವಾತಂತ್ರ್ಯ ನೀವು ಪಡೆದುಕೊಂಡಿದ್ದೀರಿ. ಆ ಸ್ವಾತಂತ್ರ್ಯವನ್ನು ನಾನು ಕಳೆದುಕೊಂಡು ಇಲ್ಲಿ ಕುಳಿತಿರುವುದರಿಂದ ನನ್ನ ವಿವೇಚನೆಯನ್ನು ಕೂಡ ಉಪಯೋಗ ಮಾಡುತ್ತೇನೆಂಬ ಮಾತನ್ನು ಹೇಳಿ, ತಾವೇನು ಸಹಕಾರ ಕೊಟ್ಟಿದ್ದೀರಿ, ತಮಗೆ ನನ್ನ ವಂದನೆಗಳನ್ನರ್ಪಿಸುತ್ತಿದ್ದೇನೆ. ದಯಮಾಡಿ ನನ್ನಲ್ಲಿ ವಿಶ್ವಾಸವಿಡಿ. ಈ ವಿಚಾರವನ್ನು ಬಗೆಹರಿಸೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇಂದು ನಾವು ಬೆಳಿಗ್ಗೆ 10 ಗಂಟೆಗೆ ಬಂದೆವು....

ಅಧ್ಯಕ್ಷರು : ಇನ್ನು 5-10 ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಉತ್ತರ ಸಮಾಧಾನವಾಗುವುದಿಲ್ಲ. ಕ್ಲಾರಿಫಿಕೇಷನ್ ಕೇಳಬೇಕಾಗುತ್ತದೆ.

ಅಧ್ಯಕ್ಷರು : ಇನ್ನು ಉಳಿದಿರುವುದು ಜಯಪ್ರಕಾಶ್ ಹೆಗಡೆಯವರು ಮೀನುಗಾರಿಕೆ ಇಲಾಖೆ ಮತ್ತು ರೇಷ್ಮೆ ಇಲಾಖೆ ಮಾತ್ರ. ನನಗೆ ರೂಲ್ಸ್ ಪರ್ಮಿಟ್ ಮಾಡುವುದಿಲ್ಲ. ನನ್ನ ಸಮಸ್ಯೆ ಅದು.

ಶ್ರೀ ವಾಟಾಳ್ ನಾಗರಾಜ್ : ಈಗ ಅವರಿಗೆ ಅವಕಾಶ ಕೊಡುವುದಕ್ಕಿಂತ ಹೆಚ್ಚಾಗಿ, ಸುದೀರ್ಘವಾದ ಉತ್ತರ ಕೊಡುತ್ತಾರೆ ಅವರಿಗೂ ಒಂದು ಅವಕಾಶ ಸಿಕ್ಕಿದಹಾಗೆ ಆಗುತ್ತದೆ.

ಅಧ್ಯಕ್ಷರು : ನಾನು ಮಾರನೇ ದಿವಸಕ್ಕೆ ತೆಗೆದುಕೊಂಡುಹೋಗುವಂತಾದ್ದು ಇದ್ದಿದ್ದರೆ, ಇಷ್ಟೆಲ್ಲಾ ಕಸರತ್ತು ಮಾಡಬೇಕಾಗಿರಲಿಲ್ಲ. 5 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ಹೆಚ್. ಶಿವಪ್ಪ : ಇಲ್ಲಿ ಎರಡೂ ಕಡೆಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ, ತಲೆ ತಿರುಗುತ್ತಿದೆ. ನಮ್ಮ ಗತಿ ಏನು?

ಅಧ್ಯಕ್ಷರು : ನಾನು ತಮ್ಮೆಲ್ಲರಲ್ಲೂ ಕೂಡ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇಂತಹ ಸನ್ನಿವೇಶ ಯಾವಾಗಲೂ ಉದ್ಭವವಾಗಿರಲಿಲ್ಲ. ಬೇಡಿಕೆಗಳ ಮೇಲೆ ಉತ್ತರ ಪ್ರಾರಂಭವಾದ ಮೇಲೆ ನಿಲ್ಲಿಸುವುದಕ್ಕೆ ಬರುವುದಿಲ್ಲ. 5-10 ನಿಮಿಷಗಳ ಕಾಲ ಸಹಕರಿಸಿ. ನಿರ್ಣಯವನ್ನು ನಾಳೆ ತೆಗೆದು ಕೊಳ್ಳುತ್ತೇನೆ. ವರದೇಗೌಡರೇ, ತಾವು ಉತ್ತರವನ್ನು ಪ್ರಾರಂಭ ಮಾಡಿ. 5 ನಿಮಿಷದಲ್ಲಿ ಮುಗಿಸಿಬಿಡಿ ನೀವೇನು ಕೆಲಸದಲ್ಲಿ ನಂಬಿಕೆ ಇರುವವರು, ಮಾತನಾಡುವುದಿಲ್ಲ, ಏನೂ ಇಲ್ಲ, ಬೇಗ ಮುಗಿಸಿಬಿಡಿ. ನಾನು ಮಾಡಿರತಕ್ಕ ಕೆಲಸಕ್ಕೆ ಪ್ರೋತ್ಸಾಹ ಕೊಡಿ ಎಂದು ಹೇಳಿ.

## ರೇಷ್ಮೆ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ

+ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಇಲಾಖೆ ಸೂಕ್ಷ್ಮವಾದ ಇಲಾಖೆ, ಮುಖ್ಯವಾಗಿ ಮೈಸೂರು ಬಿತ್ತನೆ ವಲಯದಲ್ಲಿ ರೋಗಗಳನ್ನು ತಡೆಗಟ್ಟಲು

ಪ್ರಮುಖವಾಗಿ ರೈತರ ಮನೆಗಳಿಗೆ ಸೋಂಕು ರೋಗ ನಿವಾರಣೆ ಬಗ್ಗೆ ಹೆಚ್ಚಿನ ಗಮನ ಹರಿಸಲಾಯಿತು. ಅದರ ಪ್ರಯುಕ್ತ ಮಿಶ್ರ ತಳಿ ಪ್ರದೇಶಕ್ಕೂ ಉತ್ತಮ ಗುಣಮಟ್ಟದ ಮೊಟ್ಟೆ ಕೊಡಲು ಸಾಧ್ಯವಾಯಿತು. ಸುಮಾರು 4 ಸಾವಿರ ಜನ ದಿನಗೂಲಿ ನೌಕರರು ನಮ್ಮ ಇಲಾಖೆಯಿಂದ ಬೇರೆ ಇಲಾಖೆಗೆ ಹೋಗಿದ್ದರೂ ಕೂಡ ಗುತ್ತಿಗೆ ಆಧಾರದ ಮೇಲೆ, ರೋಗ ನಿಯಂತ್ರಣವನ್ನು ನಿಯಂತ್ರಿಸಿ ಮತ್ತು ನಮ್ಮಲ್ಲಿ ಕಂಪ್ಯೂಟರ್ ಯಂತ್ರದಿಂದ ಹೆಣ್ಣು ಮತ್ತು ಗಂಡು ಗೂಡುಗಳನ್ನು ಪ್ರತ್ಯೇಕಿಸಿ, ಮೊಟ್ಟೆ ಮಾಡಿದ ಪ್ರಯುಕ್ತ ಉತ್ತಮ ಇಳುವರಿ ಮತ್ತು ಗುಣಮಟ್ಟದ ರೇಷ್ಮೆ ಕರ್ನಾಟಕದ ಇತಿಹಾಸದಲ್ಲೇ 9,500 ಮೆಟ್ರಿಕ್ ಟನ್ ಉತ್ಪಾದಿಸಲಾಯಿತು. ಅಷ್ಟೇ ಅಲ್ಲ, ವೆಂಡೀಟಾ ಕೂಡ ಒಂಭತ್ತೂವರೆಯಿಂದ ಎಂಟೂವರೆಗೆ ಇಳಿಸಿರುವುದು, 100 ಮೊಟ್ಟೆಗೆ 30 ಕೆ.ಜಿ.ಯಿಂದ 50 ಕೆ.ಜಿ.ಗೆ ಹೆಚ್ಚಿಸಿರುವುದು ಸದರಿ ವರ್ಷದಲ್ಲಿ ಜೀವನ್ ತಳಿ ಎಂದು ಒಂದು ಕಡಿ, ಎಸ್-36 ಎಂಬ ಕಡ್ಡಿ, ಎಸ್-13 ಎಂಬ ಕಡ್ಡಿ ಈ ತಳಿಗಳನ್ನು ಸುಮಾರು ಏಳುವರೆ ಸಾವಿರ ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆ ಪ್ರದೇಶದಲ್ಲಿ ಬೆಳೆಸಲಾಗಿದೆ. ಸಂಶೋಧನಾಲಯದಿಂದ ಹೊರತಂದ ಹೊಸ ತಾಂತ್ರಿಕತೆಯಿಂದ ಮತ್ತು ಇವತ್ತು ರೆಂಬೆ ಪದ್ಧತಿ ಮಾಡಿದ್ದರಿಂದ ಸುಮಾರು 85 ಸಾವಿರ ಮೆಟ್ರಿಕ್ ಟನ್ ಗೂಡಿನ ಪ್ರಮಾಣವನ್ನು ಹೆಚ್ಚಿಸಲಾಯಿತು. ಅದರಲ್ಲಿಯೂ ಕೂಡ ಸರಾಸರಿ 135 ರಿಂದ 160 ಕ್ಕೂ ಹೆಚ್ಚು ಬೆಲೆ ಕೊಡಲಾಯಿತು. ಮಾರುಕಟ್ಟೆಯಲ್ಲಿ ತೂಕದಲ್ಲಿ ಮೋಸ ಇದೆಯೆಂದು ರೈತರು ಕೇಳುತ್ತಿದ್ದುದರಿಂದ, ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ನಾವು ಅಳವಡಿಸಿದ್ದರಿಂದ ಈಗ ಯಾವ ತೊಂದರೆಯೂ ಇರುವುದಿಲ್ಲ. ಈಗ ಹೊಸ ತಳಿಗಳಾದ ಸಿ.ಎಸ್.ಆರ್., ಕೆ.ಎಸ್-1 ಈ ಸಂತತಿಗಳು 1997-98ನೇ ಸಾಲಿನಲ್ಲಿ ಸುಮಾರು 3.50 ಲಕ್ಷ ಮತ್ತು 3.4 ಲಕ್ಷ ಎನ್ ಪಿ ಕೆ 2, ಕೆ.ಎಸ್-1 ತಳಿಗಳನ್ನು ಸಾಕಲಾಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನಿಮ್ಮ ಆ ನೋಟ್ಸ್ ಕೊಟ್ಟರೆ, ಆ ಮೇಲೆ ಅದನ್ನು ನಾನು ಓದಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ವಿಷಯದ ಮೇಲೆ ಯಾರು ಮಾತನಾಡಿದ್ದಾರೆ, ಅವರು ಕೇಳಬೇಕೆಂದು ಕುಳಿತಿದ್ದಾರೆ. ಆದ್ದರಿಂದ, ಅವರು ಒಂದೆರಡು ಸ್ಕೀಮ್‌ಗಳನ್ನು ಹೇಳಲಿ.....

ಶ್ರೀ ಎಂ. ವರದೇಗೌಡ : ಅವರು ಪ್ರತ್ಯೇಕವಾಗಿ ಹುಳು ಮನೆ ಕಟ್ಟಿಕೊಡಬೇಕೆಂದು ಹೇಳಿದ್ದಾರೆ. ಈ ಸಾರಿ ಪ್ರಪ್ರಥಮವಾಗಿ 20 ಕೋಟಿ ರೂಪಾಯಿಗಳನ್ನು ನಬಾರ್ಡ್‌ನಲ್ಲಿ ನೇರವಾಗಿ ರೇಷ್ಮೆ ಇಲಾಖೆಗೆ ಕೊಡುತ್ತಿದ್ದಾರೆ. ಈ ಸಾರಿ 5 ಸಾವಿರ ಮನೆಗಳನ್ನು ಕಟ್ಟುವಂಥ ಪ್ರಯತ್ನ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ, ಇವತ್ತು ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂಬ ಮಾತನ್ನು ಹೇಳಿದ್ದಾರೆ. ಅದನ್ನೂ ಕೂಡ ಮಾಡುತ್ತೇವೆ. ಇವತ್ತು ಅವರಿಗೆ 25 ರಿಂದ 60 ರಷ್ಟು ಸಬ್ಸಿಡಿಯನ್ನು ಕೂಡ ಕೊಡುತ್ತೇವೆ. ಇವತ್ತೇನು ಈ ಇಲಾಖೆಯಿಂದ 4 ಸಾವಿರ ಜನ ನೌಕರರು ಹೋಗಿದ್ದಾರೋ ಇನ್ನು ಉಳಿಕೆಯವರನ್ನು ಈ ಇಲಾಖೆಯಲ್ಲಿ ಉಳಿಸಬೇಕೆಂದು ಹೇಳಿದ್ದಾರೆ. ಆ 4 ಸಾವಿರ ಜನರನ್ನು ಇಲ್ಲಿಯೇ ಸೂಪರ್ ನ್ಯೂಮರರಿ ಸ್ಕೇಲ್ ಕೊಟ್ಟು ಖಾಯಂ ಮಾಡುತ್ತೇವೆಂಬುದನ್ನು ಈ ಸಂದರ್ಭದಲ್ಲಿ

ಹೇಳುತ್ತೇನೆ. ಇನ್ನೇನು ಇಲಾಖೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ ಆ ವಿಷಯ ಸಚಿವ ಸಂಪುಟದ ಮುಂದೆ ಹೋಗಿರುವುದರಿಂದ, ಇದರ ಒಪ್ಪಿಗೆ ತೆಗೆದುಕೊಂಡು ಈಗೇನು ಆನ್ ಕಾಂಟ್ರಾಕ್ಟ್ ಮೇಲೆ ಮಾಡಿಸುತ್ತಿದ್ದೇವೆ, ಅದನ್ನು ತಪ್ಪಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ. ಇವತ್ತು ಡ್ರಿಪ್ ಇರಿಗೇಷನ್‌ಗೆ ಒಂದು ಹೆಕ್ಟೇರ್‌ಗೆ 25 ಸಾವಿರ ರೂಪಾಯಿ ಸಹಾಯಧನ ಕೊಡತಕ್ಕಂಥದ್ದು ಮತ್ತು ಒಂದು ಎಕರೆಗೆ 50 ರಷ್ಟು ಸಬ್ಸಿಡಿ ಕೊಡತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಚೈನಾ ದೇಶದಿಂದ ಬರತಕ್ಕ ರೇಷ್ಮೆಗೆ, ಹಿಂದೆಯೇ ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ, ಸನ್ಮಾನ್ಯ ಜಾಲಪ್ಪನವರು ಜವಳಿ ಖಾತೆ ಸಚಿವರಾಗಿದ್ದ ಸಂದರ್ಭದಲ್ಲಿ ನಾವು ಮನವಿಯನ್ನು ಕೊಟ್ಟಿದ್ದೇವೆ. ಅದು ನಿಲ್ಲಿಸಬೇಕು, ನಿಲ್ಲಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ, ಬರತಕ್ಕ ರೇಷ್ಮೆ ಮೇಲೆ ಹಾಕತಕ್ಕ ಟ್ಯಾಕ್ಸನ್ನು ಇಂಕ್ರೀಸ್ ಮಾಡಬೇಕೆಂಬ ಮಾತನ್ನು ಕೂಡ ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬರೀ ರೇಷ್ಮೆ ಮಾತ್ರ ಬರುತ್ತಾ ಇಲ್ಲ ರೇಷ್ಮೆ ಬಟ್ಟೆಯೇ ಬರುತ್ತಿದೆ. ಅದನ್ನು ತಪ್ಪಿಸದಿದ್ದರೆ, ಅಪಾಯ ಎಂಬುದನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಂ. ವರದೇಗೌಡ : ಚೈನಾ ದೇಶದಿಂದ ಬರತಕ್ಕ ರೇಷ್ಮೆ ತುಂಬಾ ಕಡಿಮೆಯಾಗಿದೆ. ಮೊನ್ನೆ ಜವಳಿ ಸಚಿವರು ಬಂದಿದ್ದ ಸಂದರ್ಭದಲ್ಲಿ ನಮ್ಮನ್ನೆಲ್ಲಾ ಸೇರಿಸಿ ಸಭೆ ಕರೆದಿದ್ದರು. ಅವರಿಗೂ ಕೂಡ ಒಂದು ಮನವಿಯನ್ನು ಸಲ್ಲಿಸಿದ್ದೇವೆ. ಆದುದರಿಂದ, ಇವತ್ತು ರೇಷ್ಮೆ ಇಲಾಖೆಯಲ್ಲಿ ಯಾವುದೇ ರೋಗಗಳಾಗಲೀ, ಯಾವುದೇ ಸಮಸ್ಯೆಯಾಗಲೀ ಇಲ್ಲ. ಈಗ ಹೊಸ ಪ್ರದೇಶಗಳಲ್ಲಿ ಅಂದರೆ ಉತ್ತರ ಕರ್ನಾಟಕದ ಭಾಗಗಳಲ್ಲೂ ಹೆಚ್ಚು ಬೆಳೆಯಬೇಕೆಂದು ಇರುವುದರಿಂದ 7 ಕಡೆಗಳಲ್ಲಿ ಕೇಂದ್ರಗಳನ್ನು ನಿರ್ಮಾಣ ಮಾಡಿ, ಬಾಡಿಗೆ ಕೊಟ್ಟು ಅಲ್ಲಿಯೂ ಕೂಡ ಮಾರ್ಕೆಟ್ ವ್ಯವಸ್ಥೆಯನ್ನು ಮಾಡುತ್ತೇವೆ. ಮಾನ್ಯ ಪುಟ್ಟಣ್ಣಯ್ಯನವರು ರೇಷ್ಮೆ ಬೆಳೆಗಾರರ ಸಹಕಾರ ಸಂಘ ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ. ಇವತ್ತು ಕುಣಿಗಲ್‌ನಲ್ಲಿ ಸುಮಾರು 32 ಅಂತಹ ಬಿಲ್ಡಿಂಗ್‌ಗಳನ್ನು ಕಟ್ಟಿದ್ದೇವೆ. ಅವುಗಳನ್ನೆಲ್ಲಾ ಸಹಕಾರ ಸಂಘ ಮಾಡಬೇಕೆಂಬ ತೀರ್ಮಾನವನ್ನು ಇಲಾಖೆ ತೆಗೆದುಕೊಂಡಿದೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಮೈಸೂರು ಬಿತ್ತನೆ ವಲಯದಲ್ಲಿ ನೀವು ಪ್ರಾರಂಭ ಮಾಡಬೇಕು. ಬಿತ್ತನೆ ಗೂಡು ತಯಾರು ಮಾಡತಕ್ಕಂಥವರು ನಾವು. ಆದರಿಂದ, ನೀವು ಮನೆಗಳನ್ನು ಅಲ್ಲಿ ಪ್ರಾರಂಭ ಮಾಡಿ. ಎರಡನೆಯದು ಬೋನಸ್ ಕೊಡಿ ಎಂದು ಹೇಳಿದೆ. ಎರಡೂವರೆ ವರ್ಷದಿಂದ ನೀವು ಬೋನಸ್ ಕೊಟ್ಟಿಲ್ಲ.

ಶ್ರೀ ಎಂ. ವರದೇಗೌಡ : ಈ ಬೋನಸ್ ವಿಷಯವೂ ಕೂಡ ಸಚಿವ ಸಂಪುಟದ ಮುಂದೆ ಹೋಗಿದೆ. ಅದನ್ನು ಸ್ವಲ್ಪ ದಿವಸದಲ್ಲಿ ಪರಿಹಾರ ಮಾಡುತ್ತೇವೆ. ಇವತ್ತು ಅದಕ್ಕೋಸ್ಕರವೇ 32 ಸಹಕಾರ ಸಂಘಗಳನ್ನು ಮಾಡುತ್ತಿದ್ದೇವೆ. ಏಕೆಂದರೆ, ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡರೆ

ಅನೇಕ ಎಡರು ತೊಡರುಗಳಿರುತ್ತವೆ. ಅದರಿಂದ, ಸಹಕಾರ ಸಂಘಗಳ ಮೂಲಕವೇ ಆ ಮನೆಗಳನ್ನು ಕಟ್ಟಬೇಕೆಂದು ಹೇಳಿ, ಬಿತ್ತನೆ ವಲಯದಲ್ಲಿಯೇ 32 ಸಹಕಾರ ಸಂಘಗಳನ್ನು ತೆರೆಯಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಆದ್ದರಿಂದ, ಈ ಬೇಡಿಕೆಗಳಿಗೆ ಅನುಮೋದನೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

## ಮೀನುಗಾರಿಕೆ ಮತ್ತು ಬಂದರು ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಇಲಾಖೆ ಒಂದು ಭೌತಿಕವಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಹೇಳಿದರು ಈ ಇಲಾಖೆಯಲ್ಲಿ ಯಾವ ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ ಎಂದು. ಪ್ರಾಯಶಃ ನನ್ನ ಅನುಭವದಲ್ಲಿ ಹಿಂದೆ ಏನೂ ಕಾರ್ಯಕ್ರಮವನ್ನು ಆಗಿರಲಿಲ್ಲ ಈಗ ನಾವು ಒಂದು ಕಾರ್ಯಕ್ರಮವನ್ನು ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಹಿಂದೆ ಅವರು ಮಾಡಿದ್ದರೆ ನಾವು ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಒಂದು ಅಭಿಪ್ರಾಯ ಬರುತ್ತದೆ. 1994ನೇ ಇಸವಿಯಲ್ಲಿ ನಮ್ಮ ಸರ್ಕಾರ ಬಂದಾಗ 8 ಕೋಟಿ ಮೀನಿನ ಮರಿಗಳನ್ನು ಉತ್ಪಾದನೆ ಮಾಡುತ್ತಿದ್ದರು. ಇವತ್ತು ನಾವು 20 ಕೋಟಿ ಮೀನಿನ ಮರಿಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಒಳನಾಡು ಮೀನುಗಾರಿಕೆಯಲ್ಲಿ 70 ಸಾವಿರ ಟನ್ ಮೀನು ಉತ್ಪಾದನೆ ಮಾಡುತ್ತಿರುವುದನ್ನು ಈಗ ನಾವು ಒಂದು ಲಕ್ಷ ಹತ್ತು ಟನ್‌ಗೆ ಹೆಚ್ಚು ಮಾಡಿದ್ದೇವೆ. ಅದೇ ರೀತಿಯಲ್ಲಿ ಅನೇಕ ಮೀನು ಮರಿ ಉತ್ಪಾದನಾ ಕೇಂದ್ರಗಳು ನಮ್ಮ ಮೀನುಗಾರರ ಬೇಡಿಕೆಗಳನ್ನು ತುಂಬಲಿಕ್ಕೆ ಆಗುತ್ತಿಲ್ಲ ಆದ್ದರಿಂದ ಸರ್ಕಾರಿವಲಯದಲ್ಲಿ ಇದ್ದಂತಹ ಮೀನು ಮರಿ ಉತ್ಪಾದನಾ ಕೇಂದ್ರಗಳು ಏನು ಡೀಫಂಕ್ಟ್ ಆಗಿವೆ, ಅವುಗಳನ್ನೆಲ್ಲಾ ಪ್ರವೇಟೈಜ್ ಮಾಡಿ ಈ ಫಿಷರೀಸ್ ಗ್ರ್ಯಾಜುಯೇಟ್ಸ್‌ಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಮಾಡಬೇಕೆನ್ನುವ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಹಾಗೆಯೇ ಬೇಸಾಯಕ್ಕೆ ಯೋಗ್ಯವಲ್ಲದ ಜವಗು ಮತ್ತು ಚೋಳು ಪ್ರದೇಶದಲ್ಲಿ ನಾವು ಸುಮಾರು 30 ಸಾವಿರ ಸಬ್ಸಿಡಿಯನ್ನು ಕೊಟ್ಟು, ಮೀನು ಮರಿ ಉತ್ಪಾದನೆಗೆ ಉತ್ತೇಜನವನ್ನು ಕೊಡುತ್ತಿದ್ದೇವೆ. ಒಳನಾಡು ಮೀನು ಮಹಾಮಂಡಲಿ ಎಂದು ಮೈಸೂರಿನಲ್ಲಿ ಒಂದು ಇದೆ. ಪ್ರಾಯಶಃ ಹಿಂದಿನ ಮೀನುಗಾರಿಕಾ ಸಚಿವರು ಅದರ ಅಧ್ಯಕ್ಷರಾಗಿದ್ದರು, ಈಗ ನಾನು ಅದರ ಅಧ್ಯಕ್ಷನಾಗಿದ್ದೇನೆ. ಪ್ರಾಯಶಃ ಅದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಟ್ಟರೆ ಅನುಕೂಲವಾಗಬಹುದು, ಹಿಂದೆ ಅದು ಯಾವ ರೀತಿ ಇತ್ತು ಈಗ ಯಾವ ರೀತಿ ಇದೆ, 1994ನೇ ಇಸವಿಯಲ್ಲಿ 24.98 ರಷ್ಟು ಮೀನು ಮರಿ ಭಿತ್ತನೆಯನ್ನು ಮಾಡಿದ್ದರೆ ನಾವು 174 ಲಕ್ಷದಷ್ಟು ಮೀನು ಮರಿ ಬಿತ್ತನೆಯನ್ನು ಮಾಡಿದ್ದೇವೆ. ಹಾಗೆ ಈ ಒಂದು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಗಳಲ್ಲಿ ಎನ್‌ಸಿ ಡಿಸಿ ನೆರವನ್ನು ಪಡೆದು ನಾವು ಮೀನುಗಾರಿಕಾ ಅಭಿವೃದ್ಧಿಯನ್ನು ಮಾಡಿದ್ದೇವೆ. ಮೈಸೂರು ಮಹಾ ಮಂಡಲಿಯವರು ಈ ಮೀನಿನ ಮರಿಯ ಉತ್ಪಾದನೆಯನ್ನು ಎಷ್ಟು ಮಾಡಿದ್ದಾರೆ ಎನ್ನುವ